# <u>ಕೊಡಗು ಜಿಲ್ಲಾ ಪೊಲೀಸ್</u>




ಮಹಿಳಾ ಮತ್ತು ಮಕ್ಕಳ ಸುರಕ್ಷತೆಯ ದೃಷ್ಠಿಯಿಂದ ಹಾಗು ಇನ್ನಿತರ ಘಟನೆಗಳು ಸಂಭವಿಸುವ ಸಂದರ್ಭಗಳಲ್ಲಿ ತುರ್ತಾಗಿ ಸ್ಪಂದಿಸಲು ಕರ್ನಾಟಕ ರಾಜ್ಯ ಪೊಲೀಸ್ ವತಿಯಿಂದ ಹೊಸದಾದ ' ಕೆ.ಎಸ್.ಪಿ. ಮೊಬೈಲ್ ಆ್ಯಪ್‌ನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಈ ಮೊಬೈಲ್ ಆ್ಯಪ್‌ನ ಆವೃತ್ತಿಯನ್ನು ಗೂಗಲ್ ಪ್ಲೇಸ್ಟೋರ್‌ನಲ್ಲಿ ಹಾಗು ಆ್ಯಪಲ್ ಆ್ಯಪ್ ಸ್ಟೋರ್‌ನಲ್ಲಿ ಅಪ್ ಲೋಡ್ ಮಾಡಲಾಗಿದ್ದು ಪ್ರಾಯೋಗಿಕವಾಗಿ ಸಾರ್ವಜನಿಕರು ಉಪಯೋಗಿಸಬಹುದಾಗಿರುತ್ತದೆ. ಯಾವುದೇ Android and IOS ತಂತ್ರಾಂಶ ಹೊಂದಿರುವ ಮೊಬೈಲ್ ಫೋನ್‌ಗಳಲ್ಲಿ ಸದರಿ ಆ್ಯಪ್‌ನ್ನು ಬಳಸಬಹುದಾಗಿದ್ದು ಸುಲಲಿತವಾದ ಬಳಕೆಗೆ ಮೊಬೈಲ್ ಫೋನಿನಲ್ಲಿ ಇಂಟರ್‌ನೆಟ್ ಸೌಲಭ್ಯ ಹಾಗು ಜಿಪಿಎಸ್ ಸೌಲಭ್ಯಗಳು ಅವಶ್ಯವಾಗಿರುತ್ತದೆ.

ಸಾರ್ವಜನಿಕರು ಗೂಗಲ್ ಪ್ಲೇಸ್ಟೋರ್ ಹಾಗು ಆ್ಯಪಲ್ ಆ್ಯಪ್ ಸ್ಟೋರ್‌ನಲ್ಲಿ ಲಭ್ಯವಿರುವ Karnataka State Police (Official) ಎಂಬ ಹೆಸರಿನಲ್ಲಿರುವ ಈ ಆ್ಯಪ್‌ನ್ನು ಡೌನ್‌ಲೋಡ್ ಮಾಡಿಕೊಂಡು ಸದರಿ ಆ್ಯಪ್‌ನ್ನು ರಿಜಿಸ್ಟರ್ ಮಾಡಿಕೊಳ್ಳುವ ಮುಖಾಂತರ ಉಪಯೋಗಿಸಬಹುದಾಗಿದೆ. ಈ ಆ್ಯಪ್‌ನಲ್ಲಿ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳ ಹೆಸರುಗಳು ಹಾಗು ದೂರವಾಣಿ ಸಂಖ್ಯೆ ಮತ್ತು ವಿಳಾಸಗಳನ್ನು ನಮೂದಿಸಲಾಗಿದ್ದು ತುರ್ತು ಸಂದರ್ಭಗಳಲ್ಲಿ ಬೇಕಾದ ಠಾಣೆಗಳಿಗೆ ಈ ಆ್ಯಪ್ ಮೂಲಕವೇ ನೇರವಾಗಿ ಕರೆ ಅಥವಾ ಇ-ಮೇಲ್ ಗಳನ್ನು ಮಾಡಬಹುದಲ್ಲದೇ ಸದರಿ ಠಾಣೆಗಳಿಗೆ ಹೋಗಲು ಬೇಕಾದ ದಾರಿಯನ್ನು ಸಹಾ ಗೂಗಲ್ ಮ್ಯಾಪ್ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಅಲ್ಲದೆ ಸದರಿ ಆ್ಯಪ್‌ನಲ್ಲಿರುವ Incident report ಆಯ್ಕೆ ಮೂಲಕ ಬಳಕೆದಾರರು ತುರ್ತು ಸಂದರ್ಭಗಳಲ್ಲಿ ಅಥವಾ ಯಾವುದೇ ದುರ್ಘಟನೆಗಳು ಸಂಭವಿಸಿದ ಸಂದರ್ಭದಲ್ಲಿ ಅಂಹತ ಮಾಹಿತಿಗಳನ್ನು ಈ ಆ್ಯಪ್‌ನ ಮೂಲಕ ಘಟನಾ ಸ್ಥಳದ ವಿವರ ಹಾಗು ಲೊಕೇಶನ್ ಮ್ಯಾಪ್‌ನೊಂದಿಗೆ ನೇರವಾಗಿ ವರದಿ ಮಾಡಿದರೆ ಜಿಲ್ಲಾ ನಿಯಂತ್ರಣ ಕೇಂದ್ರದ ಮೂಲಕ ಕೂಡಲೇ ಅಂತಹ ಘಟನೆಗಳ ಬಗ್ಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ಪೊಲೀಸ್ ಇಲಾಖೆಗೆ ಉತ್ತಮ ಮಟ್ಟದ ಸಹಾಯವಾಗುವುದರಲ್ಲಿ ಅನುಮಾನವಿರುವುದಿಲ್ಲ. ಸಾರ್ವಜನಿಕರು ಈ ಮೊಬೈಲ್ ಆ್ಯಪ್‌ನ ಸದುಪಯೋಗ ಪಡೆಯುವಂತೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಪಿ. ರಾಜೇಂದ್ರ ಪ್ರಸಾದ್, ಐಪಿಎಸ್, ರವರು ತಿಳಿಸಿದ್ದಾರೆ.